# ಕನ್ನಡ ಅಭಿವೃದ್ಧಿ ಪ್ರಾಧಿಕಾರ

ವಿಧಾನಸೌಧ, ಬೆಂಗಳೂರು

ಸಂಪಾದಕರು/ವರದಿಗಾರರು

ಪತ್ರಿಕಾ ಮತ್ತು ದೃಶ್ಯ ಮಾಧ್ಯಮ . ದಿನಾಂಕ:೧೪-೦೮-೨೦೨೦

. . . . . . . . . . .

:ಪ್ರಕಟಣೆಯ ಕೃಪೆಗಾಗಿ: (ಇಂದು ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮ)

ಮಾನ್ಯರೆ.

## ಕನ್ನಡದ ಹೊಸ ಆವಿಷ್ಕಾರಗಳು ಹೆಚ್ಚಬೇಕು: ಟಿ.ಎಸ್.ನಾಗಾಭರಣ

### 'ನೂತನ ಕನ್ನಡದ ಕೀಲಿಮಣೆ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪ್ರಾಧಿಕಾರ ಅಧ್ಯಕ್ಷರ ಅಭಿಮತ'

ಬೆಂಗಳೂರು: ಕನ್ನಡದ ತಂತ್ರಜ್ಞಾನ ಬೆಳವಣಿಗೆಗೆ ಪೂರಕವಾಗುವ ನಿಟ್ಟಿನಲ್ಲಿ ಕ-ನಾದ ಸಂಸ್ಥೆಯು ಕನ್ನಡದ ಕೀಲಿಮಣೆಯೊಂದನ್ನು ಆವಿಷ್ಕರಿಸಿರುವುದು ಅತ್ಯಂತ ಶ್ಲಾಘನೀಯವಾದುದು ಎಂದು ಕನ್ನಡ **ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ ಅವರು ಬಣ್ಣಿಸಿದರು.**

ಕ-ನಾದ ಸಂಸ್ಥೆಯು ನೂತನವಾಗಿ ಆವಿಷ್ಕರಿಸಿರುವ ಕನ್ನಡದ ಯೂನಿಕೋಡ್ ಕೀಲಿಮಣೆಯನ್ನು ವಿಧಾನಸೌಧದ ೨ನೇ ಮಹಡಿಯಲ್ಲಿರುವ ತಮ್ಮ ಕಛೇರಿಯಲ್ಲಿ ಸರಳ ಕಾರ್ಯಕ್ರಮದಲ್ಲಿ ಇಂದು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಕನ್ನಡಕ್ಕೆ ಇಂತಹ ಹೊಸ ಹೊಸ ಆವಿಷ್ಕಾರಗಳು ಹೆಚ್ಚೆಚ್ಚು ಆಗಬೇಕಿದೆ. ಆ ಮೂಲಕ ಕನ್ನಡವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಅಗತ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಎಲ್ಲರೂ ಇದೂವರೆವಿಗೂ ಇಂಗ್ಲಿಷ್ ಕಿಲಿಮಣೆಯಲ್ಲಿ ಕನ್ನಡವನ್ನು ಟಂಕಿಸಲಾಗುತ್ತಿದೆ. (ಟಂಕಿಸುವುದು, ಒತ್ತುವುದು, ಬಳಸುವುದು, ಸೃಜಿಸುವುದು) ಆದರೆ ಕ-ನಾದ ಸಂಸ್ಥೆಯ ಗುರುಪ್ರಸಾದ್ ಮತ್ತವರ ತಂಡವು ಹೊಸದಾಗಿ ಕನ್ನಡದ ಕೀಲಿಮಣೆಯನ್ನು ರೂಪಿಸಿದ್ದಾರೆ. ಇದರ ಪ್ರಯೋಜನವು ಎಲ್ಲ ಸರ್ಕಾರಿ ಕಛೇರಿಗಳು, ಸಂಘ-ಸಂಸ್ಥೆಗಳು ಪಡೆಯುವಂತಾಗಲಿ ಎಂದು ಹಾರೈಸಿದರು.

**ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ ಅವರು ಮಾತನಾಡಿ,** ಕನ್ನಡ ಭಾಷೆಯಲ್ಲಿ ಶಿಕ್ಷಣ ಅಭಿವೃದ್ಧಿಯತ್ತ ಸಾಗಲು ಇಂತಹ ಅನ್ವೇಷಣೆಗಳು ಇನ್ನೂ ಹೆಚ್ಚು ನಡೆಯಬೇಕಿದೆ. ಕನ್ನಡಿಗರ ಅನ್ವೇಷಣೆಯಾದ ಕ-ನಾದ ಕೀಲಿಮಣೆ ಆವಿಷ್ಕಾರವು ಕನ್ನಡ ಹಾಗೂ ಭಾರತೀಯ ಭಾಷಾ ಕಲಿಕೆಗೆ ಒಂದು ವಿಶೇಷ ಉಪಕರಣವಾಗಿದೆ. ಈ ಕೀಲಿಮಣೆಯಲ್ಲಿ ಕನ್ನಡವನ್ನು ಸುಲಭವಾಗಿ ಮತ್ತು ವೇಗವಾಗಿ ಬಳಸಬಹುದಾಗಿದೆ. ಇದು ಕನ್ನಡ ಹಾಗೂ ಭಾರತೀಯ ಭಾಷಾ ಕಲಿಕೆಗೆ ಒಂದು ವಿಶೇಷ ಉಪಕರಣವಾಗಲಿದೆ ಎಂದು ತಿಳಿಸಿದರು.

**ಕ-ನಾದ ಸಂಸ್ಥೆಯ ಸಂಸ್ಥಾಪಕರಾದ ಗುರುಪ್ರಸಾದ್ ಅವರು ಮಾತನಾಡಿ,** ಕನ್ನಡದ ನೂತನ ಕೀಲಿಮಣೆಯು ಪ್ರಾಧಿಕಾರದ ಅಧ್ಯಕ್ಷರಿಂದ ಅಧಿಕೃತವಾಗಿ ಬಿಡುಗಡೆಗೊಂಡಿದ್ದು ಸಂತಸದ ವಿಷಯವಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ, ಕನ್ನಡಿಗ, ಕನ್ನಡ ಸಾಹಿತ್ಯ ಪರವಾದ ಸಾಕಷ್ಟು ಕೆಲಸಗಳನ್ನು ನಿರ್ವಹಿಸುತ್ತಿದೆ. ಈ ಕ-ನಾದ ನೂತನವಾಗಿ ರೂಪಿಸಿರುವ ಕನ್ನಡ ಕೀಲಿಮಣೆಯು ಆಂಗ್ಲ ಕೀಲಿಮಣೆಗಿಂತ ಶೇ.೩೦ರಷ್ಟು ವೇಗವಾಗಿ ಬಳಸಬಹುದಾಗಿದೆ. ಕರ್ನಾಟಕದ ಎಲ್ಲ ಕಛೇರಿ, ಶಾಲೆಗಳಲ್ಲಿ ಕನ್ನಡ ಕಲಿಕೆಗೆ ಉಪಯುಕ್ತ ಸಾಧನವಾಗಿದೆ. ಶಾಲೆಗಳಲ್ಲಿ ಆಂಕಿಕ ವಿದ್ಯುನ್ಮಾನ ಗಣಕಯಂತ್ರ ಕನ್ನಡ ಸಾಕ್ಷರತೆಗೆ ಉತ್ತಮ ಉಪಕರಣವಾಗಲಿದೆ. ಕನ್ನಡ ಭಾಷಾ ಕಲಿಕಾ ತರಬೇತಿಗೆ ಎಲ್ಲ ಭಾರತೀಯ ಭಾಷೆಯ ಬಳಕೆಗೆ ಉತ್ತಮ ಸಾಧನವಾಗಲಿದೆ. ಶಾಲೆಗಳಿಗೆ ಸೂಕ್ತವಾದ ಸಣ್ಣ ಗಾತ್ರದ ಗಣಕಯಂತ್ರ ಜೋಡಣೆಯ ಯೋಜನೆಯಾಗಿದೆ. ಅಲ್ಲದೆ ದ್ವಿಭಾಷಾ ವಿನ್ಯಾಸದಿಂದ ಆಂಗ್ಲಭಾಷೆಯನ್ನು ಸುಲಭವಾಗಿ ಕಲಿಯಬಹುದಾಗಿದೆ ಎಂದು ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಿದರು.

**ಒಂದು ಕನ್ನಡದ ಕೀಲಿಮಣೆ, ಸಣ್ಣದೊಂದು ಲ್ಯಾಪ್ ಟಾಪ್ ನ್ನು ಕೇವಲ ೧೨,೦೦೦ ರೂಗಳಿಗೆ ಈ ಹೊಸ ಮಾದರಿ ಲ್ಯಾಪ್ ಟಾಪ್ ಕ-**ನಾದ ಸಂಸ್ಥೆಯಿಂದ ದೊರೆಯಲಿದೆ. ಆಸಕ್ತರು ಕ-ನಾದ ಸಂಸ್ಥೆಯನ್ನು ಸಂಪರ್ಕಿಸಬಹುದಾಗಿದೆ ಎಂದರು.

ಈ ಲ್ಯಾಪ್ ಟಾಪ್ ಅನ್ನು ಮೊಬೈಲ್ ಗೆ ಬಳಸಬಹುದಾದ ಪವರ್ ಬ್ಯಾಂಕಿನಿಂದಲೂ ಚಾಲೂ ಮಾಡಬಹುದಾಗಿದ್ದು ವಿದ್ಯುತ್ ಸಮಸ್ಯೆ ಎದುರಿಸುವ ಗ್ರಾಮೀಣ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ. ಅಲ್ಲದೆ ನೂತನವಾಗಿ ರೂಪಿಸಲಾಗಿರುವ ಕನ್ನಡದ ಕೀಲಿಮಣೆ (ಕೀಬೋರ್ಡ್)ಯಿಂದ ಇಂಗ್ಲಿಷನ್ನು ಸಹ ಸುಲಭವಾಗಿ ಕಲಿಯಬಹುದಾಗಿದೆ. ಈ ಕುರಿತು ಶಿಕ್ಷಣ ಸಚಿವರಿಗೂ ವಿವರಿಸುವುದಾಗಿ ತಿಳಿಸಿದರು.

ಕ-ನಾದ ಸಂಸ್ಥೆಯ ಸಂಸ್ಥಾಪಕರಾದ ವಿಶ್ವನಾಥ, ನಿರ್ದೇಶಕರಾದ ಗೋಪಾಲ್ ಅಯ್ಯಂಗಾರ್, ಲಿಪಿತಜ್ಞರಾದ ಡಾ.ಬಿವಿಕೆ ಶಾಸ್ತ್ರಿ, ಶೆರಿನ್, ಬೆರಳಚ್ಚು ತಜ್ಞ ಶ್ರೀ ರೇಣುಕ, ಸತೀಶ್ ಅಗ್ಗಲ ಹಾಗೂ ಸಮೃಧ ಇತರರು ಉಪಸ್ಥಿತರಿದ್ದರು.

**(ಈ ಮಾಹಿತಿಯನ್ನು ತಮ್ಮ ಘನ ಪತ್ರಿಕೆಯಲ್ಲಿ ವರದಿ ಮಾಡಿ ಸಹಕಾರ ನೀಡುವಂತೆ ಕೋರಿಕೆ)**

# ಕನ್ನಡದ ಕೀಲಿಮಣೆ ಲೋಕಾರ್ಪಣೆ

**ಸಂ.ಕ ಸಮಾಚಾರ ಬೆಂಗಳೂರು**

ಇತ್ತೀಚೆಗೆ ಹೆಚ್ಚುತ್ತಿರುವ ಕನ್ನಡ ತಂತ್ರಜ್ಞಾನದ ಪ್ರಗತಿಯು ಕನ್ನಡ ಭಾಷೆಯ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅಭಿಪ್ರಾಯಪಟ್ಟರು.

ಕ-ನಾದ ಸಂಸ್ಥೆಯು ನೂತನವಾಗಿ ಆವಿಷ್ಕರಿಸಿರುವ ಕನ್ನಡದ ಯೂನಿಕೋಡ್ ಕೀಲಿಮಣೆಯನ್ನು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಕನ್ನಡ ತಂತ್ರಜ್ಞಾನದ ಬೆಳವಣಿಗೆಗೆ ಪೂರಕವಾಗುವ ನಿಟ್ಟಿನಲ್ಲಿ ಕ-ನಾದ ಸಂಸ್ಥೆಯು ಕನ್ನಡದ ಕೀಲಿಮಣೆಯನ್ನು ಆವಿಷ್ಕರಿಸಿರುವುದು ಅತ್ಯಂತ ಶ್ಲಾಘನೀಯ. ಕನ್ನಡದ ಬೆಳವಣಿಗೆಗೆ ಇಂತಹ ಆವಿಷ್ಕಾರಗಳು ಹೆಚ್ಚಬೇಕಿದೆ. ಈ ಮೂಲಕ ಕನ್ನಡ ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಅಗತ್ಯತೆ ಇದೆ ಎಂದು ತಿಳಿಸಿದರು.

ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ. ಮುರಳೀಧರ ಮಾತನಾಡಿ, ಕನ್ನಡ ಭಾಷೆಯಲ್ಲಿ ಶಿಕ್ಷಣ ಅಭಿವೃದ್ಧಿಯತ್ತ ಸಾಗಲು ಇಂತಹ ಅನ್ವೇಷಣೆಗಳು ಇನ್ನೂ ಹೆಚ್ಚು ನಡೆಯಬೇಕಿದೆ. ಕ-ನಾದ ಕೀಲಿಮಣೆ ಆವಿಷ್ಕಾರವು ಕನ್ನಡ ಹಾಗೂ ಭಾರತೀಯ ಭಾಷಾ ಕಲಿಕೆಗೆ ಒಂದು ವಿಶೇಷ ಉಪಕರಣವಾಗಿದೆ. ಈ ಕೀಲಿಮಣೆಯಲ್ಲಿ ಕನ್ನಡವನ್ನು ಸುಲಭವಾಗಿ ಮತ್ತು ವೇಗವಾಗಿ ಬಳಸಬಹುದಾಗಿದೆ. ಕ-ನಾದ ಸಂಸ್ಥೆಯಿಂದ ಒಂದು ಕನ್ನಡದ ಕೀಲಿಮಣೆ ಮತ್ತು ಸಣ್ಣದೊಂದು ಲ್ಯಾಪ್‌ಟಾಪ್ ಕೇವಲ 12 ಸಾವಿರ ರೂ.ಗೆ ದೊರೆಯಲಿದೆ ಎಂದರು. ಈ ವೇಳೆ ಕ-ನಾದ ಸಂಸ್ಥೆಯ ಸ್ಥಾಪಕ ಗುರುಪ್ರಸಾದ್, ಸಂಸ್ಥಾಪಕ ವಿಶ್ವನಾಥ, ನಿರ್ದೇಶಕ ಗೋಪಾಲ್ ಅಯ್ಯಂಗಾರ್, ಲಿಪಿತಜ್ಞ, ಡಾ.ಬಿವಿಕೆ ಶಾಸ್ತ್ರಿ, ಶೆರಿನ್, ಬೆರಳಚ್ಚು ತಜ್ಞೆ ರೇಣುಕ ಮತ್ತಿತರರಿದ್ದರು.



ಕ-ನಾದ ಸಂಸ್ಥೆಯು ನೂತನವಾಗಿ ಆವಿಷ್ಕರಿಸಿರುವ ಕನ್ನಡದ ಯೂನಿಕೋಡ್ ಕೀಲಿಮಣೆಯನ್ನು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಲೋಕಾರ್ಪಣೆಗೊಳಿಸಿದರು.

ಕನಾದ ಸಂಸ್ಥೆಯಿಂದ ಅಭಿವೃದ್ಧಿ

# ಕನ್ನಡದ ಯೂನಿಕೋಡ್ ಕೀಲಿಮಣೆ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ-ನಾದ' ಸಂಸ್ಥೆಯ ಕನ್ನಡದ ಯೂನಿಕೋಡ್ ಕೀಲಿಮಣೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಶುಕ್ರವಾರ ಲೋಕಾರ್ಪಣೆ ಮಾಡಿದರು.

ಪ್ರಾಧಿಕಾರವು ನಗರದಲ್ಲಿ ಅಯೋಜಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕನ್ನಡ ಭಾಷೆಯ ಬೆಳವಣಿಗೆ ದೃಷ್ಟಿಯಿಂದ ಇಂತಹ ಆವಿಷ್ಕಾರಗಳು ಹೆಚ್ಚಬೇಕು. ತಂತ್ರಜ್ಞಾನದ ನೆರವಿನಿಂದ ಭಾಷೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕಿದೆ. ಇಷ್ಟು ದಿನ ಕನ್ನಡದ ಅಕ್ಷರಗಳನ್ನು ಬಳಕೆ ಮಾಡಬೇಕಾದರೂ ಇಂಗ್ಲಿಷ್ ಅಕ್ಷರಗಳ ಕೀಲಿಮಣೆಯನ್ನೇ ಬಳಕೆ ಮಾಡಬೇಕಿತ್ತು. ಈಗ ಆ ಸಮಸ್ಯೆಗೆ ಪರಿಹಾರ ದೊರೆತಿದೆ. ಎಲ್ಲ ಸರ್ಕಾರಿ ಕಚೇರಿಗಳು ಹಾಗೂ ಸಂಘ-ಸಂಸ್ಥೆಗಳು ಕನ್ನಡದ ಕೀಲಿಮಣೆ ಬಳಕೆ ಮಾಡುವಂತಾಗಬೇಕು' ಎಂದರು.



ಕೀಲಿಮಣೆಯನ್ನು ಟಿ.ಎಸ್. ನಾಗಾಭರಣ ಲೋಕಾರ್ಪಣೆ ಮಾಡಿದರು. ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ. ಮುರಳೀಧರ, ಕನಾದ ಸಂಸ್ಥೆಯ ಸಂಸ್ಥಾಪಕ ಗುರುಪ್ರಸಾದ್, ನಿರ್ದೇಶಕ ಗೋಪಾಲ್ ಅಯ್ಯಂಗಾರ್, ಲಿಪಿತಜ್ಞ ಡಾ.ಬಿ.ವಿ.ಕೆ. ಶಾಸ್ತ್ರಿ ಇದ್ದರು.

**ಮುಖ್ಯಾಂಶಗಳು**

- ಆಂಗ್ಲ ಕೀಲಿಮಣೆಗಿಂತ ಶೇ 30ರಷ್ಟು ವೇಗವಾಗಿ ಬಳಸಬಹುದು
- ಸಣ್ಣ ಗಾತ್ರದ ಲ್ಯಾಪ್ ಟಾಪ್ ಅಭಿವೃದ್ಧಿ

**ಶೇ 30ರಷ್ಟು ವೇಗ:** 'ಕ-ನಾದ' ಸಂಸ್ಥೆಯ ಸಂಸ್ಥಾಪಕ ಗುರುಪ್ರಸಾದ್ ಅವರು ಮಾತನಾಡಿ, 'ಕನ್ನಡದ ಕೀಲಿಮಣೆಯನ್ನು ಆಂಗ್ಲ ಕೀಲಿಮಣೆಗಿಂತ ಶೇ 30ರಷ್ಟು ವೇಗವಾಗಿ ಬಳಸಬಹುದು. ಶಾಲೆಗಳಲ್ಲಿ ಬಳಸುವ ಸಣ್ಣ ಗಾತ್ರದ ಗಣಕಯಂತ್ರಗಳಿಗೆ ಕೂಡ ಜೋಡಣೆ ಮಾಡಬಹುದು. ದ್ವಿಭಾಷಾ ವಿನ್ಯಾಸ ಮಾಡಲಾಗಿದ್ದು, ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಯಲ್ಲಿ ಟೈಪಿಂಗ್ ಮಾಡಲು ಸಾಧ್ಯವಾಗುತ್ತದೆ. ₹ 12 ಸಾವಿರಕ್ಕೆ ಸಣ್ಣ ಗಾತ್ರದ ಲ್ಯಾಪ್ ಟಾಪ್ ಕೂಡ ಅಭಿವೃದ್ಧಿಪಡಿಸಲಾಗಿದೆ. ಅದರ ಜತೆಗೆ ಕನ್ನಡದ ಕೀಲಿಮಣೆಯನ್ನು ಪ್ರತ್ಯೇಕವಾಗಿ ನೀಡಲಾಗುತ್ತದೆ' ಎಂದರು.

# ಕನ್ನಡಕ್ಕೆ ಕನ್ನಡದ್ದೇ ಕಂಪ್ಯೂಟರ್ ಕೀಬೋರ್ಡ್ ಅನಾವರಣ

**ವಿಕ ಸುದ್ದಿಲೋಕ** ಬೆಂಗಳೂರು

ಕನ್ನಡಕ್ಕೆ ಕನ್ನಡದ್ದೇ ಆದ ಕೀಲಿಮಣೆಯನ್ನು ಕ-ನಾದ ಸಂಸ್ಥೆಯು ಆವಿಷ್ಕರಿಸಿರುವುದು ಶ್ಲಾಘನೀಯ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಬಣ್ಣಿಸಿದರು.

ಕ-ನಾದ ಸಂಸ್ಥೆ ಆವಿಷ್ಕರಿಸಿರುವ ಕನ್ನಡದ ಯೂನಿಕೋಡ್ ಕೀಲಿಮಣೆಯನ್ನು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸರಳ ಕಾರ್ಯಕ್ರಮದಲ್ಲಿ ಶುಕ್ರವಾರ ಲೋಕಾರ್ಪಣೆ ಮಾಡಿದರು. ಕನ್ನಡಕ್ಕೆ ಇಂತಹ ಹೊಸ ಹೊಸ ಆವಿಷ್ಕಾರಗಳು ಹೆಚ್ಚೆಚ್ಚು ಆಗಬೇಕಿದೆ. ಆ ಮೂಲಕ ಕನ್ನಡವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಅಗತ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.



ನಾಗಾಭರಣ ಅವರು ಕ-ನಾದ ಕೀಬೋರ್ಡ್ ಬಿಡುಗಡೆ ಮಾಡಿದರು.

ಇದುವರೆಗೂ ಇಂಗ್ಲಿಷ್ ಕೀಲಿಮಣೆಯಲ್ಲಿ ಕನ್ನಡವನ್ನು ಟೈಪ್ ಮಾಡಲಾಗುತ್ತಿದೆ. ಆದರೆ ಕ-ನಾದ ಸಂಸ್ಥೆಯ ಗುರುಪ್ರಸಾದ್ ಮತ್ತವರ ತಂಡವು ಹೊಸದಾಗಿ ಕನ್ನಡದ ಕೀಲಿಮಣೆ ರೂಪಿಸಿದ್ದಾರೆ. ಇದರ ಪ್ರಯೋಜನವನ್ನು ಎಲ್ಲ ಸರಕಾರಿ ಕಚೇರಿಗಳು, ಸಂಘ-ಸಂಸ್ಥೆಗಳು ಪಡೆಯುವಂತಾಗಲಿ ಎಂದು ಶುಭ ಕೋರಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ. ಮುರಳಿಧರ ಮಾತನಾಡಿ, ಕನ್ನಡ ಭಾಷೆಯಲ್ಲಿ ಶಿಕ್ಷಣ ಅಭಿವೃದ್ಧಿಯತ್ತ ಸಾಗಲು ಇಂತಹ ಅನ್ವೇಷಣೆಗಳು ಇನ್ನಷ್ಟು ನಡೆಯಬೇಕಿದೆ. ಕನ್ನಡಿಗರ ಅನ್ವೇಷಣೆಯಾದ ಕ-ನಾದ ಕೀಲಿಮಣೆ ಆವಿಷ್ಕಾರವು ಕನ್ನಡ ಹಾಗೂ ಭಾರತೀಯ ಭಾಷಾ ಕಲಿಕೆಗೆ ಒಂದು ವಿಶೇಷ ಉಪಕರಣವಾಗಿದೆ. ಈ ಕೀಲಿಮಣೆಯಲ್ಲಿ ಕನ್ನಡವನ್ನು ಸುಲಭವಾಗಿ ಮತ್ತು ವೇಗವಾಗಿ ಬಳಸಬಹುದಾಗಿದೆ ಎಂದು ತಿಳಿಸಿದರು.

ಕ-ನಾದ ಸಂಸ್ಥೆಯ ಸಂಸ್ಥಾಪಕರಾದ ಗುರುಪ್ರಸಾದ್ ಮಾತನಾಡಿ, ಕನ್ನಡದ ನೂತನ ಕೀಲಿಮಣೆಯು ಪ್ರಾಧಿಕಾರದ ಅಧ್ಯಕ್ಷರಿಂದ ಬಿಡುಗಡೆಗೊಂಡಿದ್ದು ನಮ್ಮ ಹೆಮ್ಮೆ. ಪ್ರಾಧಿಕಾರವು ಕನ್ನಡ, ಕನ್ನಡಿಗ, ಕನ್ನಡ ಸಾಹಿತ್ಯ ಪರವಾದ ಸಾಕಷ್ಟು ಕೆಲಸಗಳನ್ನು ನಿರ್ವಹಿಸುತ್ತಿದೆ. ಕ-ನಾದ ನೂತನವಾಗಿ ರೂಪಿಸಿರುವ ಕನ್ನಡ ಕೀಲಿಮಣೆಯನ್ನು ಆಂಗ್ಲ ಕೀಲಿಮಣೆಗಿಂತ ಶೇ.30ರಷ್ಟು ವೇಗವಾಗಿ ಬಳಸಬಹುದಾಗಿದೆ.

ಕ-ನಾದ ಸಂಸ್ಥೆಯ ಸಂಸ್ಥಾಪಕರಾದ ವಿಶ್ವನಾಥ, ನಿರ್ದೇಶಕರಾದ ಗೋಪಾಲ್ ಅಯ್ಯಂಗಾರ್, ಲಿಪಿತಜ್ಞರಾದ ಡಾ.ಬಿ.ವಿ.ಕೆ. ಶಾಸ್ತ್ರಿ ಶೆರಿನ್, ಬೆರಳಚ್ಚು ತಜ್ಞ ರೇಣುಕ, ಸತೀಶ್ ಅಗ್ಗಲ ಹಾಗೂ ಸಮೃದ್ಧ ಇತರರು ಉಪಸ್ಥಿತರಿದ್ದರು.

40 ಸಾವಿರ ಹೆಕ್ಟೇರ್‌ಗೂ ಹೆಚ್ಚು ಗಡೆ ಮಾಡಲು ಕ್ರಮ ಕೈಗೊ ಯುಂಟಾಗಿದೆ. ಅದರಲ್ಲೂ ಗಾಳಿ ಮಾಡಿದ್ದಾರೆ. ಸಾಧ್ಯ. ಎನ್?ಡಿಆರ್??ಎ

# ಕನ್ನಡದ ಹೊಸ ಆವಿಷ್ಕಾರಗಳು ಹೆಚ್ಚಬೇಕು: ಟಿ.ಎಸ್.ನಾಗಾಭರಣ



ಬೆಂಗಳೂರು: ಕನ್ನಡದ ತಂತ್ರಜ್ಞಾನ ಬೆಳವಣಿಗೆಗೆ ಪೂರಕವಾಗುವ ನಿಟ್ಟಿನಲ್ಲಿ ಕ-ನಾದ ಸಂಸ್ಥೆಯು ಕನ್ನಡದ ಕೀಲಿಮಣೆಯೊಂದನ್ನು ಆವಿಷ್ಕರಿಸಿರುವುದು ಅತ್ಯಂತ ಶ್ಲಾಘನೀಯವಾದುದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ ಅವರು ಬಣ್ಣಿಸಿದರು.

ಕ-ನಾದ ಸಂಸ್ಥೆಯು ನೂತನವಾಗಿ ಆವಿಷ್ಕರಿಸಿರುವ ಕನ್ನಡದ ಯೂನಿಕೋಡ್ ಕೀಲಿಮಣೆಯನ್ನು ವಿಧಾನಸೌಧದ 2ನೇ ಮಹಡಿಯಲ್ಲಿರುವ ತಮ್ಮ ಕಛೇರಿಯಲ್ಲಿ ಸರಳ ಕಾರ್ಯಕ್ರಮದಲ್ಲಿ ಇಂದು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಕನ್ನಡಕ್ಕೆ ಇಂತಹ ಹೊಸ ಹೊಸ ಆವಿಷ್ಕಾರಗಳು ಹೆಚ್ಚೆಚ್ಚು ಆಗಬೇಕಿದೆ. ಆ ಮೂಲಕ ಕನ್ನಡವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಅಗತ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಎಲ್ಲರೂ ಇದೂವರೆವಿಗೂ ಇಂಗ್ಲಿಷ್ ಕಿಲಿಮಣೆಯಲ್ಲಿ ಕನ್ನಡವನ್ನು ಟಂಕಿಸಲಾಗುತ್ತಿದೆ. ಟಂಕಿಸುವುದು, ಓತ್ತುವುದು, ಬಳಸುವುದು, ಸೃಜಿಸುವುದು ಮಾಡಬೇಕಾಗಿತ್ತು. ಆದರೆ ಕ-ನಾದ ಸಂಸ್ಥೆಯ ಗುರುಪ್ರಸಾದ್ ಮತ್ತವರ ತಂಡವು ಹೊಸದಾಗಿ ಕನ್ನಡದ ಕೀಲಿಮಣೆಯನ್ನು ರೂಪಿಸಿದ್ದಾರೆ. ಇದರ ಪ್ರಯೋಜನವು ಎಲ್ಲ ಸರ್ಕಾರಿ ಕಛೇರಿಗಳು, ಸಂಘ-ಸಂಸ್ಥೆಗಳು ಪಡೆಯುವಂತಾಗಲಿ ಎಂದು ಹಾರೈಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ ಅವರು ಮಾತನಾಡಿ, ಕನ್ನಡ ಭಾಷೆಯಲ್ಲಿ ಶಿಕ್ಷಣ ಅಭಿವೃದ್ಧಿಯತ್ತ ಸಾಗಲು ಇಂತಹ ಅನ್ವೇಷಣೆಗಳು ಇನ್ನೂ ಹೆಚ್ಚು ನಡೆಯಬೇಕಿದೆ. ಕನ್ನಡಿಗರ ಅನ್ವೇಷಣೆಯಾದ ಕ-ನಾದ ಕೀಲಿಮಣೆ ಆವಿಷ್ಕಾರವು ಕನ್ನಡ ಹಾಗೂ ಭಾರತೀಯ ಭಾಷಾ ಕಲಿಕೆಗೆ ಒಂದು ವಿಶೇಷ ಉಪಕರಣವಾಗಿದೆ. ಈ ಕೀಲಿಮಣೆಯಲ್ಲಿ ಕನ್ನಡವನ್ನು ಸುಲಭವಾಗಿ ಮತ್ತು ವೇಗವಾಗಿ ಬಳಸಬಹುದಾಗಿದೆ. ಇದು ಕನ್ನಡ ಹಾಗೂ ಭಾರತೀಯ ಭಾಷಾ ಕಲಿಕೆಗೆ ಒಂದು ವಿಶೇಷ ಉಪಕರಣವಾಗಲಿದೆ ಎಂದು ತಿಳಿಸಿದರು.

ಕ-ನಾದ ಸಂಸ್ಥೆಯ ಸಂಸ್ಥಾಪಕರಾದ ಗುರುಪ್ರಸಾದ್ ಅವರು ಮಾತನಾಡಿ, ಕನ್ನಡದ ನೂತಲ ಕೀಲಿಮಣೆಯು ಪ್ರಾಧಿಕಾರದ ಅಧ್ಯಕ್ಷರಿಂದ ಅಧಿಕೃತವಾಗಿ ಬಿಡುಗಡೆಗೊಂಡಿದ್ದು ಸಂತಸದ ವಿಷಯವಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ, ಕನ್ನಡಿಗ, ಕನ್ನಡ ಸಾಹಿತ್ಯ ಪರವಾದ ಸಾಕಷ್ಟು ಕೆಲಸಗಳನ್ನು ನಿರ್ವಹಿಸುತ್ತಿದೆ. ಈ ಕ-ನಾದ ನೂತನವಾಗಿ ರೂಪಿಸಿರುವ ಕನ್ನಡ ಕೀಲಿಮಣೆಯು ಆಂಗ್ಲ ಕೀಲಿಮಣೆಗಿಂತ ಶೇ.30ರಷ್ಟು ವೇಗವಾಗಿ ಬಳಸಬಹುದಾಗಿದೆ. ಕರ್ನಾಟಕದ ಎಲ್ಲ ಕಛೇರಿ, ಶಾಲೆಗಳಲ್ಲಿ ಕನ್ನಡ ಕಲಿಕೆಗೆ ಉಪಯುಕ್ತ ಸಾಧನವಾಗಿದೆ. ಶಾಲೆಗಳಲ್ಲಿ ಆಂಕಿಕ ವಿದ್ಯುನ್ಮಾನ ಗಣಕಯಂತ್ರ ಕನ್ನಡ ಸಾಕ್ಷರತೆಗೆ ಉತ್ತಮ ಉಪಕರಣವಾಗಲಿದೆ, ಕನ್ನಡ ಭಾಷಾ ಕಲಿಕಾ ತರಬೇತಿಗೆ ಎಲ್ಲ ಭಾರತೀಯ ಭಾಷೆಯ ಬಳಕೆಗೆ ಉತ್ತಮ ಸಾಧನವಾಗಲಿದೆ, ಶಾಲೆಗಳಿಗೆ ಸೂಕ್ತವಾದ ಸಣ್ಣ ಗಾತ್ರದ ಗಣಕಯಂತ್ರ ಜೋಡಣೆಯ ಯೋಜನೆಯಾಗಿದೆ, ಅಲ್ಲದೆ ದ್ವಿಭಾಷಾ ವಿನ್ಯಾಸದಿಂದ ಆಂಗ್ಲಭಾಷೆಯನ್ನು ಸುಲಭವಾಗಿ ಕಲಿಯಬಹುದಾಗಿದೆ ಎಂದು ಪ್ರಾತ್ಯಕ್ಷಿಕೆಯ ಮೂಲಕ ವಿವರಿಸಿದರು.

ಒಂದು ಕನ್ನಡದ ಕೀಲಿಮಣೆ, ಸಣ್ಣದೊಂದು ಲ್ಯಾಪ್ ಟಾಪ್ ನ್ನು ಕೇವಲ 12,000 ರೂಗಳಿಗೆ ಸಿಗಲಿದೆ. ಈ ಹೊಸ ಮಾದರಿ ಲ್ಯಾಪ್ ಟಾಪ್ ಹುಜನರ ಉಪಯೋಗಿ ದೃಷ್ಟಿಯಿಂದ ಅಭಿವೃದ್ಧಿಪಡಿಸಲಾಗಿದ್ದು, ಕ-ನಾದ ಸಂಸ್ಥೆಯಿಂದ ದೊರೆಯಲಿದೆ. ಆಸಕ್ತರು ಕ-ನಾದ ಸಂಸ್ಥೆಯನ್ನು ಸಂಪರ್ಕಿಸಬಹುದಾಗಿದೆ ಎಂದರು.

ಈ ಲ್ಯಾಪ್ ಟಾಪ್ ಅನ್ನು ಮೊಬೈಲ್ ಗೆ ಬಳಸಬಹುದಾದ ಫವರ್ ಬ್ಯಾಂಕಿನಿಂದಲೂ ಚಾಲೂ ಮಾಡಬಹುದಾಗಿದ್ದು ವಿದ್ಯುತ್ ಸಮಸ್ಯೆ ಎದುರಿಸುವ ಗ್ರಾಮೀಣ ವಿದ್ಯಾರ್ಥಿಗಳಿಗೆ ವರದಾನವಾಗಲಿದೆ. ಅಲ್ಲದೆ ನೂತನವಾಗಿ ರೂಪಿಸಲಾಗಿರುವ ಕನ್ನಡದ ಕೀಲಿಮಣೆ (ಕೀಬೋರ್ಡ್)ಯಿಂದ ಇಂಗ್ಲಿಷನ್ನು ಸಹ ಸುಲಭವಾಗಿ ಕಲಿಯಬಹುದಾಗಿದೆ. ಈ ಕುರಿತು ಶಿಕ್ಷಣ ಸಚಿವರಿಗೂ ವಿವರಿಸುವುದಾಗಿ ತಿಳಿಸಿದರು.

ಕ-ನಾದ ಸಂಸ್ಥೆಯ ಸಂಸ್ಥಾಪಕರಾದ ವಿಶ್ವನಾಥ, ನಿರ್ದೇಶಕರಾದ ಗೋಪಾಲ್ ಅಯ್ಯಂಗಾರ್, ಲಿಪಿತಜ್ಞರಾದ ಡಾ.ಬಿವಿಕೆ ಶಾಸ್ತ್ರಿ, ಶೆರಿನ್, ಬೆರಳಚ್ಚು ತಜ್ಞಶ್ರೀ ರೇಣುಕ, ಸತೀಶ್ ಅಗ್ಗಲ ಹಾಗೂ ಸಮೃದ್ಧ ಇತರರು ಉಪಸ್ಥಿತರಿದ್ದರು.